**ಸಿ.ಸಿ.ನಂ.: 3266/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **06–03–2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಪಿ.ಎಚ್.ಕೆ. ವಕೀಲರಿಂದ**

1. ನಾನು ಕಳೇದ ಎರಡೂವರೆ ವರ್ಷದಿಂದ ಫಿರ್ಯಾದಿ ಸಂಸ್ಥೆಯಲ್ಲಿ ವಸೂಲಾತಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಕುಮಟಾ ಹಾಗೂ ಗೋಕರ್ಣ ಶಾಖಾಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ನಾನು ಒಬ್ಬನೇ ಬರುತ್ತೇನೆ. ಆದ್ದರಿಂದ ನಾನು ಹೆಚ್ಚಿನ ಸಮಯವನ್ನು ನ್ಯಾಯಾಲಯದಲ್ಲಿ ಕಳೆಯುವುದರಿಂದ ನನಗೆ ಈ ಪ್ರಕರಣದ ಕುರಿತಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

2. ಈ ಪ್ರಕರಣದ ಸಾಲವನ್ನು ಸಾಲಗಾರರ ವ್ಯವಹಾರಕ್ಕೆ ಸಂಬಂಧಿಸಿದಂತೆ ತೆಗೆದಿರುತ್ತಾನೆ. ಆತನ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಾಲದ ಅರ್ಜಿಯೊಂದಿಗೆ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ಸಾಲದ ಅರ್ಜಿಯೊಂದಿಗೆ ಸಾಲಗಾರರ ಆದಾಯದ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ಸಾಲಗಾರನು ಚಿಕ್ಕ ಪುಟ್ಟ ಅಂಗಡಿಯನ್ನು ಹೊಂದಿರುತ್ತಾನೆ. ಸದ್ರಿ ಅಂಗಡಿಯು ಸಾಲಗಾರರನ ಸ್ವಂತದ ಅಂಗಡಿಯಾಗಿರುತ್ತದೆ.

3. ಈ ಪ್ರಕರಣದೊಂದಿಗೆ ಸಾಲದ ಅರ್ಜಿಯೊಂದಿಗೆ ಸಾಲದ ಭದ್ರತೆಗಾಗಿ ಸಾಲಗಾರನ ಆಧಾರ ಕಾರ್ಡನ್ನು ಪಡೆದುಕೊಂಡಿರುತ್ತೇವೆ. ಸಾಮಾನ್ಯವಾಗಿ ಸಾಲಕ್ಕಾಗಿ ಅರ್ಜಿ ಬಂದಂತಹ ಸಂದರ್ಭದಲ್ಲಿ ಸಾಲಗಾರನ ಆದಾಯದ ಮಿತಿಯ ಮೇರೆಗೆ ಸಾಲವನ್ನು ನೀಡುತ್ತೇವೆ ಎಂದರೆ ಸರಿ. ಸಾಲದ ಅರ್ಜಿ ಬಂದಾಗ ಸಾಲಗಾರನ ಆದಾಯದ ಮಿತಿಯನ್ನು ಬರೆಯುತ್ತಾರೆ ಎಂದರೆ ಸರಿ. ಸಾಲದ ಅರ್ಜಿಯನ್ನು

ಬರೆದಂತಹ ಯಾವುದಾದರೂ ಅಂಶಗಳು ಸುಳ್ಳು ಎಂದು ಕಂಡು ಬಂದಾಗ ಸದ್ರಿ ಸಾಲದ ಅರ್ಜಿಯು ತೀರಸ್ಕತಗೊಳ್ಳುತ್ತದೆ.

4. ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದಂತೆ ಯಾವ ದಿನಾಂಕದಂದು ಸಾಲಕ್ಕಾಗಿ ಅರ್ಜಿ ಬಂದಿದೆ ಎಂದು ನನಗೆ ನೆನಪಿಲ್ಲ. ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದಂತೆ ನಮ್ಮ ಆಡಳಿತ ಮಂಡಳಿಯ ಸಭೆಯು ಯಾವ ದಿನಾಂಕದಿಂದು ನಡೆದಿದೆ ಎಂದು ನನಗೆ ದಾಖಲಾತಿಯನ್ನು ನೋಡಿ ಹೇಳಬೇಕು. ಸಾಲದ ಅರ್ಜಿಯನಲ್ಲಿ ಆಡಳಿತ ಮಂಡಳಿಯ ಸಭೆಯ ದಿನಾಂಕ ಹಾಗೂ ಸಾಲ ಮಂಜೂರಾದ ಬಗ್ಗೆ ನಮೂದು ಇರುತ್ತದೆ. ಸಾಲದ ಅರ್ಜಿ ಕೊಡುವ ಪೂರ್ವದಲ್ಲಿ ಸಾಲವನ್ನು ಮಂಜೂರು ಮಾಡಿರುವುದಿಲ್ಲ.

5. ನಿಪಿ 7 ರಲ್ಲಿ ಸಾಲದ ಅರ್ಜಿಯ ದಿನಾಂಕಃ 28/03/2024 ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಿನಾಂಕಃ 29/02/2024 ರಂದು ಈ ಪ್ರಕರಣದ ಸಾಲದ ಅರ್ಜಿಯು ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ7 ರ ಮೊದಲ ಪುಟದಲ್ಲಿ ದಿನಾಂಕಃ 28/03/2024 ಎಂದು ನಮೂದು ಇದೆ ಎಂದರೆ ಸಾಕ್ಷಿಯು ನಜರಚೂಕಿನಿಂದ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ7 ರಲ್ಲಿ ಕಛೇರಿಯ ಉಪಯೋಗಕ್ಕಾಗಿ ಎಂದು ಬರೆದ ಮೇಲುಗಡೆ ಎಲ್ಲಿಯೂ ಸಹ ಸಾಲದ ಅರ್ಜಿಯನ್ನು ದಿನಾಂಕಃ 29/02/2024 ರಂದು ನೀಡಲಾಗಿರುತ್ತದೆ ಎಂದರೆ ಸರಿ. ನಿಪಿ7 ರಲ್ಲಿ ಆಡಳಿತ ಮಂಡಳಿಯ ಸಭೆ ಹಾಗೂ ಸಾಲ ಮಂಜೂರಾದ ದಿನಾಂಕ ನಮೂದು ಇಲ್ಲ ಎಂದರೆ ಸರಿಯಲ್ಲ, ನಿಪಿ7 ರ ಪ್ರಕಾರ ದಿನಾಂಕಃ 01/03/2024 ರಂದು ನಮ್ಮ ಆಡಳಿತ ಮಂಡಳಿಯ ಸಭೆಯು ನಡೆದಿರುತ್ತದೆ. ಸದ್ರಿ ಆಡಳಿತ ಮದಡಳಿಯ ಸಭೆಗೆ ನಾವು ಹಾಜರ ಆಗಿರುವುದಿಲ್ಲ.

**ಸಿ.ಸಿ.ನಂ.: 3266/2025**

ಪಿ.ಡಬ್ಲ್ಯೂ:1

6. ಈ ಪ್ರಕರಣದಲ್ಲಿ ಎಲ್ ಆಯ್ ಸಿ ಪಾಲಿಸಿಯನ್ನು ಸಾಲ ಮಂಜೂರಾಗುವ ಪೂರ್ವದಲ್ಲಿ ಪಡೆದುಕೊಂಡಿರುತ್ತೇವೆಯೋ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ7 ರ ಹಿಂದೆ ಹಿಂಬರಹವನ್ನು ಯಾರು ಬರೆದಿರುತ್ತಾರೆ ಎಂದು ಶಾಖಾ ವ್ಯವಸ್ಥಾಪಕರು ಬರೆದಿರುತ್ತಾರೆ. ಆದ್ದರಿಂದ ಯಾವ ದಾಖಲಾತಿಗಳನ್ನು ಪಡೆದುಕೊಂಡಿರುತ್ತಾರೆ ಎಂಬ ಬಗ್ಗೆ ಅವರಿಗೆ ಸ್ಪಷ್ಟವಾದ ಮಾಹಿತಿ ಇದೆ ಎಂದರೆ ಅವರ ಬಳಿ ನಾನು ಕೇಳಿಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ